## ಕಾರ್ಯಾಗಾರ . . .



ಮಂಡ್ಯ ನಗರಸಭಾ ಸಭಾಂಗಣದಲ್ಲಿ ಕೇಂದ್ರ ಸರ್ಕಾರದ ದೀನದಯಾಳ್ ಅಂತ್ಯೋದಯ ಯೋಜನೆಕುರಿತು ನಡೆದ ಕಾರ್ಯಾಗಾರದಲ್ಲಿ ವಿವಿಧ ಗಣ್ಯರು ಮಾತನಾಡಿದರು.

# ಕೇಂದ್ರ-ರಾಜ್ಯ ಸರಕಾರಗಳ ಸೌಲಭ್ಯ ಪಡೆಯಿರಿ: ಅಶೋಕ



ರಾಣೇಬೆನ್ನೂರ-ಕೇಂದ್ರ ಹಾಗೂ ರಾಜ್ಯ ಸರಕಾರಗಳು ಬಡವರಿಗಾಗಿ ಹಾಗೂ ಸ್ವಯಂ ಉದ್ಯೋಗ ಮಾಡಲು ಅನೇಕ ರೀತಿಯಲ್ಲಿ ರಿಯಾಯಿತಿ ದರದ ಸಾಲ-ಸೌಲಭ್ಯ, ಸಬ್ಸಿಡಿ ಮತ್ತಿತರ ಯೋಜನೆಗಳನ್ನು ಹಿಂದಿನಿಂದಲೂ ಕಲ್ಪಿಸುತ್ತಿದೆ. ನಗರ ವ್ಯಾಪ್ತಿಯ ವಸತಿಹೀನರಿಗೆ ಆಶ್ರಯ ಮನೆ ನೀಡುವ ಮೂಲಕ ಅವರ ಏಳ್ಗೆಗೆ ಸದಾ ಶ್ರಮಿಸುತ್ತಿದ್ದು, ಇದರ ಪ್ರಯೋಜನ ಪಡೆಯಬೇಕೆಂದು ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ಮೈಸೂರು ವಿಭಾಗದ ಬೋಧಕ ಸಿ.ಅಶೋಕರವರು ಹೇಳಿದರು.

ಬುಧವಾರ ಸ್ಥಳೀಯ ನಗರಸಭೆಯ ಸಭಾಂಗಣದಲ್ಲಿ ಸ್ವ-ಸಹಾಯ ಗುಂಪುಗಳ ಮಹಿಳೆಯರಿಗಾಗಿ ಏರ್ಪಡಿಸಿದ್ದ ದೀನ ದಯಾಳ್ ಅಂತ್ಯೋದಯ ಯೋಜನೆ ಮತ್ತು ರಾಷ್ಟ್ರೀಯ ನಗರ ಜೀವನೋಪಾಯಗಳ ಅಭಿಯಾನದ ಒಂದು ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಉಪನ್ಯಾಸ ನೀಡಿ. ಸಾಮಾಜಿಕ ಕ್ರೋಢಿಕರಣ ಮತ್ತು ಸಂಸ್ಥೆಯ ಅಭಿವೃದ್ಧಿಗೆ ನಾಗರಿಕರ ಸಹಕಾರ ಅವಶ್ಯವಾಗಿದೆ. ಸರ್ವರೂ ನಗರದ ಸರ್ವಾಂಗೀಣ ಏಳ್ಗೆಗೆ ಸಹಕರಿಸಬೇಕೆಂದರು.

ಕಾರ್ಯಾಗಾರ ಉದ್ಘಾಟಿಸಿದ ನಗರಸಭಾ ಅಧ್ಯಕ್ಷೆ ನೀಲಮ್ಮ ಬುರಡಿಕಟ್ಟಿ ಮಾತನಾಡಿ ನಗರವು ಈಗಾಗಲೇ ಅಮೃತ ಯೋಜನೆ (ಸ್ಮಾರ್ಟ್ ಸಿಟಿ) ಅಡಿಯಲ್ಲಿ ಆಯ್ಕೆಗೊಂಡಿದ್ದು ಹೆಮ್ಮೆಯ ವಿಷಯವಾಗಿದೆ. ನಗರದ ಸರ್ವತೋಮುಖ ಅಭಿವೃದ್ಧಿಯ ಹಿತದೃಷ್ಟಿಯಿಂದ ವಿವಿಧ ಕಾಮಗಾರಿಗಳನ್ನು ರೂಪಿಸಲು, ವೈವಿಧ್ಯಮಯ ಯೋಜನೆಗಳನ್ನು ಹಾಕಿಕೊಳ್ಳಲು ಮುಂದಾಗಿದ್ದು, ಇದಕ್ಕೆ ನಗರದ ಸಾರ್ವಜನಿಕರ ಸಹಕಾರ ಬಹಳಷ್ಟು ಅಗತ್ಯತೆ ಇದೆ ಎಂದವರು ವಿವರಿಸಿದರು.

ಇದೇ ಸಂದರ್ಭದಲ್ಲಿ ಸ್ವ-ಸಹಾಯ ಗುಂಪುಗಳ, ರಚನೆ, ವ್ಯವಹಾರ, ಮತ್ತು ಕೌಶಲ್ಯ ತರಬೇತಿ ವಿಷಯಗಳ ಕುರಿತು ಅನೇಕ ಗೋಷ್ಠಿಗಳು ನಡೆದವು. ಪ್ರಾಧಿಕಾರದ ಅಧ್ಯಕ್ಷ ಪುಟ್ಟಪ್ಪ ಮರಿಯಮ್ಮನವರ, ನಗರಸಭೆ ಉಪಾಧ್ಯಕ್ಷೆ ವಸಂತ ಮೇದಾರ, ಸದಸ್ಯ ಪ್ರಕಾಶ ಜೈನ, ಪ್ರಭುಸ್ವಾಮಿ ಕರ್ಜಗಿಮಠ, ಬಸವರಾಜ ಹುಚ್ಚಗೊಂಡರ, ಪೌರಾಯುಕ್ತ ರವೀಂದ್ರ ಮಲ್ಲಾಪುರ, ಸಿಎಂ ಪುಟ್ಟಕ್ಕಳವರ,ವಿಟಿ ಬಸವರಾಜು ಸೇರಿದಂತೆ ಮತ್ತಿತರರು ಇದ್ದರು.